ಕಥೆ

# ಮನದ ಪರಕ್ಕ



**ಕಲ್ಲೇಶ್ ಕುಂಬಾರ್**

ಕಲೆ: ಮುರಳೀಧರ್ ರಾಥೋಡ್

'ಅಯ್ಯೋ, ಶಿವುನೆ...! ಈ ಜಲುಮದಾಗ ನನ್ನ ಬಂದಂಥ ಕೆಟ್ಟ ಪರಿಸ್ಥಿತಿ ಈ ಭೂಮಿ ಮ್ಯಾಲೆ ಯಾರಿಗೂ ಬರಬಾರದಪ್ಪೊ ತಂದೆ...'

ಕಲ್ಲವ್ವ ಒಂದೇ ಉಸುರಿನಲ್ಲಿ ಕಣ್ಣಿಗೆ ನೀರು ತಂದುಕೊಂಡು ಅಂದುಕೊಳ್ಳುತ್ತ ಗೋಡೆಗಾಣಿಸಿ ಕುಂತು ನಿಟ್ಟುಸುರು ಬಿಟ್ಟಳು. ಆ ಕ್ಷಣದಲ್ಲಿ ಆ ನಿಟ್ಟುಸುರು ಅಲೆಅಲೆಯಾಗಿ ತೇಲಿ ಬಂದು ನನ್ನ ಕಿವಿಗೆ ತಾಕಲು ಬೆಚ್ಚಿಬಿದ್ದೆ. ಮನೆಯೊಳಗೆ ತುಂಬುಕೊಂಡಿದ್ದ ನೀರವ ಮೌನವನ್ನೆಲ್ಲ ಕುಡುದವರಂಗೆ ಪಡಸಾಲೆಯೊಳಗಿನ ನಡುಗಂಬಕ್ಕೆ ಆಣಿಸಿ ನೆಲದ ಮೇಲೆ ಇಟ್ಟದ್ದ ದೀಪ ಆಕೆಯನ್ನು ಸಮಾಧಾನ ಪಡಿಸಲೆಂಬಂತೆ ಅತ್ತಿತ್ತ ಹೊಯ್ದಾಡುತ್ತ ತಣ್ಣಗೆ ಉರಿಯುತ್ತಿತ್ತು. ಆ ದೀಪದ ಬೆಳಕಲ್ಲಿ ತುಂಬಿ ಬಂದ ಕಣ್ಣೀರನ್ನು ಕೆನ್ನೆ ಮೇಲೆ ಸರಿಸುತ್ತ, ಈ ಲೋಕದೊಂದಿಗಿನ ತಂತುಗಳನ್ನು ಕಡಿದುಕೊಂಡವರಂಗೆ ದಿಂಗವರದು ಕುಂತಿದ್ದ ಆಕೆಯ ಮಾರಿ ನೋಡಿ ನನಗೆ ಕೆಡಕೆನಿಸಿತು. ಎಲ್ಲವೂ ಇದ್ದು ಏನು ಇಲ್ಲದ ಪರದೇಶಿಯಂತಾಗಿದ್ದ ಕಲ್ಲವ್ವನ ಈಗಿನ ದಯನೀಯ ಸ್ಥಿತಿಯನ್ನು ಕಂಡು ಒಳಗೊಳಗೆ ಮರುಗಿದೆ. ಆ ಹೊತ್ತಲ್ಲಿ ಆಕೆ ಇದುವರೆಗೂ ಅನುಭವಿಸಿ ಬಂದ ಬದುಕಿನಲ್ಲಿ ಉಂಡಿರಬಹುದಾದ ನೋವು, ಸಂಕಟ ಮತ್ತು ಹತಾಶೆಗಳೆಲ್ಲ ಆಕೆಯ ಮಾರಿಯ ಮೇಲೆ ಹೊಂಡದಲ್ಲಿನ ಮಲಿನ ನೀರಿನಂಗೆ ಮಡುಗಟ್ಟಿದ್ದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅದ ಕಂಡು ನಾನು ಅರೆಕ್ಷಣ ನನ್ನನ್ನೇ ಮರೆತು ಕುಂತೆ.

ಅಷ್ಟಕ್ಕೂ ಗಂಡ ಹುಚ್ಚಪ್ಪ ಸತ್ತ ನಂತರ ನನ್ನವರು ತನ್ನವರು, ನನ್ನದು ತನ್ನದು ಎನ್ನುವ ಎಲ್ಲವನ್ನೂ ಗಂಡನ ಮನೆಯಲ್ಲಿಯೇ ಬಿಟ್ಟು ಬಂದು ಹೀಗೆ ಒಬ್ಬಳೇ ಹಾರೀಗೇರಿಯಲ್ಲಿ ಅನಾಥಳಂತೆ ಬದುಕುತ್ತಿದ್ದ ಕಲ್ಲವ್ವ ಇನ್ನೂ ಜೀವದಿಂದ ಇರುವಳೋ ಇಲ್ಲ ಸತ್ತೇ ಹೋಗಿರುವಳೋ ಎಂದು ವಿಚಾರಿಸಲು ಸಹ ಆಕೆಯ ರಕ್ತ ಸಂಬಂಧಿಗಳು ಎಂದು ಹೇಳಿಕೊಳ್ಳುವ ಯಾರೊಬ್ಬರೂ ಬಂದಿರಲಿಲ್ಲ. ಅಷ್ಟಕ್ಕೂ ಆಕೆಗೆ ಬೇಕಾದವರು ಅಲ್ಲಿ ಯಾರೂ ಇರಲಿಲ್ಲ! ಇದು ಕಲ್ಲವ್ವನಿಗೆ ಇನ್ನಿಲ್ಲದ ಘಾಸಿಯನ್ನುಂಟು ಮಾಡಿತ್ತು. ಗಂಡನ ಮನೆಯಲ್ಲಿ ಬರೀ ಕಣ್ಣೀರಲ್ಲೇ ಕೈತೊಳೆಯುತ್ತ ಕಳೆದ ಆ ದಿನಗಳ ನೆನಪಲ್ಲೇ ಅದ್ದೇಗೋ ತಿಂಗಳಿಗೊಮ್ಮೆ ಬರುತ್ತಿದ್ದ ವಿಧವಾ ವೇತನ ಮತ್ತು ಪಡಿತರ ಚೀಟಿಯ ಮೇಲೆ ದೊರಕುತ್ತಿದ್ದ ಆಹಾರ ಧಾನ್ಯದಿಂದ ಹೊಟ್ಟೆ ಬಟ್ಟೆಗೆ ಸರಿದೂಗಿಸಿಕೊಂಡು ಸಾಯದೇ ಇನ್ನೂ ಬದುಕಿದ್ದಾಳೆ ಎಂಬುದು ಮಾತ್ರ, ಗಂಡನ ಮನೆಯಲ್ಲಿ ತನ್ನ ಪಾಲಿಗಿದ್ದ ಎರಡೆಕರೆ ಒಡಕಿ ಮ್ಯಾಲಿನ ಜಮೀನಿನಲ್ಲಿದ್ದ ಮಣ್ಣಿನ ಕಣಕಣಕ್ಕೂ ಗೊತ್ತಿತ್ತು! ಆಕೆ, ಆ ಜಮೀನಿಗಾಗಿ ಜೀವವನ್ನೇ ತೇದಿದ್ದಳು.

ಆ ದಿನಗಳಲ್ಲಿ ಹುಚ್ಚಪ್ಪನನ್ನು ಮದಿವಿಯಾಗಿ ಕಲ್ಲವ್ವ ನಡೆಯಲೆಂದು ಬಂದ ಹೊಸದರಲ್ಲಿ ಊರಾಚೆ ಹುಚ್ಚಪ್ಪನ ಹೆಸರಿಗಿದ್ದ ಎರಡೆಕರೆ ಒಡಕಿ ಮ್ಯಾಲಿನ ಜಮೀನಿನ ತುಂಬ ಬರೀ ಚೆಂಡಿನಾಕಾರದ ಗುಂಡು ಗುಂಡು ಕಲ್ಲುಗಳೇ ತುಂಬಿಕೊಂಡಿದ್ದವು.